(ದಿನಾಂಕಃ 02.02.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಪಾಟೀ ಸವಾಲುಃ ಜೆ.ಡಿ.ಆರ್ *1* ರವರ ಪರ ವಕೀಲರಾದ ಶ್ರೀಮತಿ ಎಸ್.ವಿ.ಎಂ ರವರಿಂದ ಃ-**

1. ಸುಮಾರು 7–8 ವರ್ಷಗಳಿಂದ ಜೆ.ಡಿ.ಆರ್ 1 ರವರು ಪರಿಚಯ ಇರುತ್ತದೆ. ಸದರಿಯವರು ತಮ್ಮ ಅಂಗಡಿಯನ್ನು ನಮ್ಮ ಕಾಪೌಂಡ್ ಒಳಗಡೆ ಹಾಕಿರುತ್ತಾರೆ. ಸದರಿ ಅಂಗಡಿಯು ಪರ್ಮನೆಂಟ್ ಗೂಡು ಅಂಗಡಿ ಇರುತ್ತದೆ.

2. ಜೆ.ಡಿ.ಆರ್ 1 ರವರು ತಳ್ಳುವ ಗಾಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಜಯನಗರದಲ್ಲಿರುವ ನಮ್ಮ ಮನೆಯಿಂದ ಸುಮಾರು 50 ಅಡಿ ಅಂತರದಲ್ಲಿ ರಾತ್ರಿ ಜೆ.ಡಿ.ಆರ್ 1 ರವರು ತಳ್ಳುವ ಗಾಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ.

3. ನಮ್ಮ ದಾವಾ ಆಸ್ತಿಯ ವಿಸ್ತೀರ್ಣ 107x66 ಅಡಿ ಇರುತ್ತದೆ. ಪೂರ್ವ–ಪಶ್ಚಿಮ 66 ಅಡಿ ಇರುತ್ತದೆ. ಉತ್ತರ–ದಕ್ಷಿಣ 66 ಅಡಿ ಇರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ರಾಷ್ಟ್ರೀಯ ಹೆದ್ದಾರಿ ಬರುತ್ತದೆ ಎಂದರೆ ಸರಿ.

4. ದಾವಾ ಆಸ್ತಿಯ ಪಕ್ಕದಲ್ಲಿ ಜೆ.ಡಿ.ಆರ್ 1 ರವರ ಆಸ್ತಿ ಇರುವುದಿಲ್ಲ ಎಂದರೆ ಸರಿ. ರಾಮಚಂದ್ರಪುರ ಗ್ರಾಮ ದಾವಾ ಆಸ್ತಿಯಿಂದ 3 ಕಿ.ಮೀ ಅಂತರದಲ್ಲಿ ಇರುತ್ತದೆ ಎಂದು ಸೂಚಿಸಿದರೆ ಸರಿ. ಜೆ.ಡಿ.ಆರ್ 1 ರವರು ಸದರಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

5. ನಾನು ಅಸಲು ದಾವಾ ಸಂಖ್ಯೆ 269/2023 ಅನ್ನು ದಾಖಲಿಸುವ ಸಂದರ್ಬದಲ್ಲಿ ಜೆ.ಡಿ.ಆರ್ 2 ರವರು ನನ್ನ ವಿರುದ್ದ ಒಂದು ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಜೆ.ಡಿ.ಆರ್ 2 ರವರು ತಮ್ಮ ಪಂಚಾಯ್ತಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ಅಸಲು ದಾವಾ ಸಂಖ್ಯೆ 269/2023 ರಲ್ಲಿ ಗ್ರಾಮ ಪಂಚಾಯ್ತಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅವರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಜೆ.ಡಿ.ಆರ್ 1 ರವರಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

7. ನಾನು ನ್ಯಾಯಾಲಯದಿಂದ ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಜೆ.ಡಿ.ಆರ್ 1 ರವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಜೆ.ಡಿ.ಆರ್ 1 ರವರು ನ್ಯಾಯಾಲಯದ ಅದೇಶವನ್ನು ಉಲ್ಲಘನೆ ಮಾಡಿರುತ್ತಾರೆ ಎಂದು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

8. ಜೆ.ಡಿ.ಆರ್ 2 ರವರು ನಮ್ಮ ವಿರುದ್ಧ ಒಂದು ಕ್ರಿಮಿನಲ್ ಮೊಖದಮ್ಮೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ಜೆ.ಡಿ.ಆರ್ 2 ರವರ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದು ನನ್ನ ವಿರುದ್ಧ ಪೊಲೀಸ್ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

9. ನಮ್ಮ ಮನೆಯ ಸುತ್ತಲೂ ತಡೆಗೋಡೆ ಇರುತ್ತದೆ ಎಂದು ಸೂಚಿಸಿದರೆ ಸರಿ. ಮೇಲಿನಬೆಸಿಗೆ ಗ್ರಾಮ ಪಂಚಾಯ್ತಿಯವರು ಎರಡು ಮಳಿಗೆಗಳನ್ನು ತೆರೆದಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ. ಮೇಲಿನಬೆಸಿಗೆ ಗ್ರಾಮ ಪಂಚಾಯ್ತಿಯನ್ನು ಸಾರ್ವಜನಿಕ ಹರಾಜಿನಲ್ಲಿ ಎರಡು ಮಳಿಗೆಗಳನ್ನು ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎರಡು ಅಂಗಡಿಗಳಲ್ಲಿ ಒಂದು ಬಟ್ಟೆ ಅಂಗಡಿ ಇನ್ನೊಂದು ಸಿಹಿ ಪದಾರ್ಥಗಳ ಅಂಗಡಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

10. ನನಗೆ ಮೇಲಿನಬೆಸಿಗೆ ಗ್ರಾಮ ಪಂಚಾಯ್ತಿಗೆ ಸಂಬಂಧಪಟ್ಟ ಎರಡು ಮಳಿಗೆಗಳು ಇದ್ದರೂ ಸಹ ಅವುಗಳನ್ನು ಮರೆಮಾಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಜೆ.ಡಿ.ಆರ್ *2, 3* ಮತ್ತು *7* ರಿಂದ *10* ರವರ ಪರ ವಕೀಲರಾದ ಶ್ರೀ ವಿ.ಎಸ್.ಕೆ ರವರಿಂದ ಃ-**

11. ನಮ್ಮ ವಾಸದ ಮನೆ ಇರುವುದು ಸುತ್ತಾ ಗ್ರಾಮದ ಸರ್ವೆ ನಂ 20 ರಲ್ಲಿ ಎಂದು ಸೂಚಿಸಿದರೆ ಸರಿಯಲ್ಲ. ನಮ್ಮ ಮನೆಯ ಉತ್ತರ ದಿಕ್ಕಿನಲ್ಲಿ 1970–75 ನೇ ಸಾಲಿನಲ್ಲಿ ಪಂಚಾಯ್ತಿಗೆ ಸಂಬಂಧಿಸಿದ ಎರಡು ಮಳಿಗೆಗಳನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ.

12. ದರ್ಮಯ್ಯ ರವರು ಸದರಿ ಗ್ರಾಮ ಪಂಚಾಯ್ತಿ ಮಳಿಗೆಗಳನ್ನು ದಿನಸಿ ಅಂಗಡಿ ಸೈಕಲ್ ಅಂಗಡಿ ಮತ್ತು ಸಿಮೆಂಟ್ ಗೋಡೌನ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಗೋಡೌನ್ ನಲ್ಲಿ ದಾಸ್ತಾನು ಮಾಡಿರುವ ಸಿಮೆಂಟ್ ನ ದೂಳು ನಮ್ಮ ಮನೆಗೆ ಬರುತ್ತಿರುವುದರಿಂದ ನಾನು ಮತ್ತು ನನ್ನ ಹೆಂಡತಿ ಮೇಲಿನಬೆಸಿಗೆ ಗ್ರಾಮ ಪಂಚಾಯ್ತಿಗೆ ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

13. ನಮ್ಮ ಮೇಲೆ ಜೆ.ಡಿ.ಆರ್ 2 ರವರು ತಮ್ಮ ಮಳಿಗೆಗಳನ್ನು ಉಳಿಸಿಕೊಳ್ಳಲು ನನ್ನ ವಿರುದ್ದ ಒಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯ್ತಿ ಅಧ್ಯಕ್ಷರು ಮತ್ತು ಪೊಲಿಸರ ವಿರುದ್ದ ಈ ದರ್ಕಸ್ತ ಅರ್ಜಿಯನ್ನು ಸಲ್ಲಿಸಿರುತ್ತೇನ ಎಂದರೆ ಸರಿಯಲ್ಲ.

14. ನನ್ನ ವಿರುದ್ದ ಗ್ರಾಮ ಪಂಚಾಯ್ತಿಯವರು ಸಲ್ಲಿಸಿರುವ ಅಸಲು ದಾವಾ ಸಂಖ್ಯೆ 73/2024 ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ನಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದುಹೊಗುತ್ತದೆ ಎಂದರೆ ಸರಿ. ಸದರಿ ಹೆದ್ದಾರಿಯನ್ನು ನಿರ್ಮಾಣ ಮಾಡುವಾಗ ನಮ್ಮ ಮನೆಯ ಗೊಡೆಯನ್ನು ತೆಗೆದುಹಾಕಿರುತ್ತಾರೆ ಎಂದರೆ ಸರಿ. ನಾನು ರಾಷ್ಟ್ರೀಯ ಹೆದ್ದಾರಿ ಪ್ರಾಧೀಕಾರದಿಂದ ಅರ್ಜಿಯನ್ನು ಸಲ್ಲಿಸಿ ಪರಿಹಾರ ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅರ್ಜಿಯನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

15. ನಾನು ಸಲ್ಲಿಸಿದ ಈ ಪ್ರಕರಣದ ದಾವೆಯು ತೀರ್ಪು ಆದ ನಂತರ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಆಗಿರುತ್ತದೆ ಎಂದರೆ ಸರಿ. ನಾನು ಜೆ.ಡಿ.ಆರ್ ರವರ ವಿರುದ್ಧ ಸುಳ್ಳು ಈ ಅಮಲ್ಜಾರಿಯನ್ನು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಜೆ.ಡಿ.ಆರ್ 4 ರಿಂದ 6 ರವರ ಪರ ವಕೀಲರು ಪಾಟೀ ಸವಾಲಿಗೆ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.